**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-12.**

**ಸಂಖ್ಯೆ:** ಪಪೂಶಿ/ಶೈ.ಶಾ-04/ತ.ಕು.03/2016-17 ದಿನಾಂಕ: 18-11-2016.

**ಜ್ಞಾಪನ**

ಅತೀ ತುರ್ತು

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಕೈಗೊಂಡ ವಿಶೇಷ ತರಬೇತಿ ಕಾರ್ಯಕ್ರಮದ ದಾಖಲೀಕರಣ ಸಲ್ಲಿಸುವ ಬಗ್ಗೆ

**ಉಲ್ಲೇಖ:** ಈ ಕಚೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ: 20-09-2016

***

ಉಲ್ಲೇಖಿತ ಸುತ್ತೋಲೆಯನ್ವಯ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಮಧ್ಯಂತರ ರಜೆಯಲ್ಲಿ ದಿನಾಂಕ: 08-10-2016 ರಿಂದ 23-10-2016 ರವರೆಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ನಡೆಸಿರುವುದನ್ನು ಸ್ಮರಿಸಿದೆ. ಈ ತರಬೇತಿ ಕಾರ್ಯಕ್ರಮದ ದಾಖಲೀಕರಣವನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಪ್ರಯುಕ್ತ, ನಿಮ್ಮ ಜಿಲ್ಲೆಯಲ್ಲಿ ನಡೆದ ತರಬೇತಿ ಕಾರ್ಯಕ್ರಮದ ದಾಖಲೀಕರಣವನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಗಳಂತೆ (ಅನುಬಂಧ-1 ರಿಂದ 4) ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳಲ್ಲಿ ತಯಾರಿಸಿ. ದಿನಾಂಕ: 21-11-2016ರೊಳಗೆ ಶೈಕ್ಷಣಿಕ ಶಾಖೆಗೆ ಸಲ್ಲಿಸಲು ತಿಳಿಸಿದೆ. ದಾಖಲೀಕರಣದಲ್ಲಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಫೋಟೋಗಳನ್ನು ಜೆಪಿಜಿ ನಮೂನೆಯಲ್ಲಿ ಸೂಕ್ತ ಅಡಿಟಿಪ್ಪಣಿಯೊಂದಿಗೆ ಹಾಗೂ ಪತ್ರಿಕಾ ವರದಿಗಳ ತುಣುಕುಗಳೊಂದಿಗೆ ಸಲ್ಲಿಸುವುದು. ದಾಖಲೀಕರಣದ ಸಾಫ್ಟ್ ಪ್ರತಿಯನ್ನು academic.pue@gmail.com ಗೆ ಕಳುಹಿಸಲು ಸೂಚಿಸಿದೆ.

18/11.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಅಗತ್ಯ ಕ್ರಮಕ್ಕಾಗಿ**

ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ

## ಅನುಬಂಧ

## ದಾಖಲೀಕರಣದ ನಮೂನೆ

1) ವಿಶೇಷ ತರಬೇತಿಗೆ ನೋಂದಾಯಿಸಲ್ಪಟ್ಟ ಹಾಗೂ ಹಾಜರಾದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಿಷಯವಾರು ವಿವರ;
(ಅನುಬಂಧ-1 ಗಮನಿಸಿ, ಎಕ್ಸೆಲ್ ಶೀಟ್‌ನಲ್ಲಿ ಕಳುಹಿಸುವುದು)

2) ವಿಶೇಷ ತರಗತಿಗಳಿಗೆ ವಿದ್ಯಾರ್ಥಿಗಳ ದಿನವಹಿ ಹಾಜರಾತಿ
(ಅನುಬಂಧ-2 ಗಮನಿಸಿ, ಎಕ್ಸೆಲ್ ಶೀಟ್‌ನಲ್ಲಿ ಕಳುಹಿಸುವುದು)

3) ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಉಪನ್ಯಾಸಕರ ವಿವರ
(ಅನುಬಂಧ-3 ಗಮನಿಸಿ, ಎಕ್ಸೆಲ್ ಶೀಟ್‌ನಲ್ಲಿ ಕಳುಹಿಸುವುದು)

4) ತರಬೇತಿಗೆ ವೆಚ್ಚವಾದ ಮೊತ್ತದ ವಿವರ-ತರಬೇತಿ ಕೇಂದ್ರವಾರು
(ಅನುಬಂಧ-4 ಗಮನಿಸಿ, ಎಕ್ಸೆಲ್ ಶೀಟ್‌ನಲ್ಲಿ ಕಳುಹಿಸುವುದು)

5) ವಿಶೇಷವಾದ ಅಂಶಗಳು: ತರಬೇತಿ ಕೇಂದ್ರದಲ್ಲಿ ಕೈಗೊಂಡ ವಿಶೇಷತೆಗಗಳ ವಿವರ ನಮೂದಿಸುವುದು. ಬಯೋಮೆಟ್ರಿಕ್ ಹಾಜರಾತಿಯನ್ನು ಅಳವಡಿಸಿರುವ ಬಗ್ಗೆ, ಸ್ಥಳೀಯವಾಗಿ ಅನುದಾನವನ್ನು ಕ್ರೋಢೀಕರಿಸಿ, ಬಳಸಿದ್ದರ ಬಗ್ಗೆ, ವಿದ್ಯಾರ್ಥಿಗಳಿಗೆ ಬಹುಮಾನ ನೀಡಿರುವ ಬಗ್ಗೆ, ಮಧ್ಯಾಹ್ನ ಉಪಹಾರವನ್ನು ವ್ಯವಸ್ಥೆ ಮಾಡಿರುವ ಬಗ್ಗೆ, ಇತ್ಯಾದಿ ಕ್ರಮಗಳ ಕುರಿತು ಫೋಟೋಸಹಿತ ವಿವರಗಳನ್ನು ನೀಡುವುದು.

6) ಸಮಸ್ಯೆಗಳು ಹಾಗೂ ಪರಿಹಾರಗಳು: ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಎದುರಿಸಿದ ಸಮಸ್ಯೆಗಳು ಹಾಗೂ ಸೂಚಿಸುವ ಪರಿಹಾರಗಳು

7) ವಿಶೇಷ ತರಬೇತಿ ಕಾರ್ಯಕ್ರಮದ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಬಂದ ವರದಿಗಳು

8) ವಿಶೇಷ ತರಬೇತಿ ಕಾರ್ಯಕ್ರಮದ ಬಗ್ಗೆ ಒಟ್ಟಾರೆ ಅಭಿಪ್ರಾಯ/ಹಿಮ್ಮಾಹಿತಿ